ಯಲಹಂಕ ಟೌನ್‌ಗೆ ಕುಡಿಯುವ ನೀರು ಸರಬರಾಜು ಮಾಡುವ ಬಗ್ಗೆ

೦೩೭೩. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ಬೆಂಗಳೂರು ಉತ್ತರ ತಾಲ್ಲೂಕಿನ ಯಲಹಂಕ ಟೌನ್‌ಗೆ ಜೀವವಿಮಾ ಕಾರ್ಪೊರೇಷನ್‌ನಿಂದ ಸಾಲವನ್ನು ತೆಗೆದುಕೊಂಡು ಕುಡಿಯುವ ನೀರು ಸರಬರಾಜು ಮಾಡಲು ಸರ್ಕಾರವು ತೀರ್ಮಾನವನ್ನು ಕೈಗೊಂಡಿದೆಯೇ ?

(ಆ) ಇಲ್ಲದಿದ್ದಲ್ಲಿ ಬಹಳ ಕಾಲದಿಂದ ಉಳಿದುಕೊಂಡಿರುವ ಯಲಹಂಕ ಟೌನ್‌ನ ಅವಶ್ಯಕತೆಗಳನ್ನು ಸರ್ಕಾರವು ಯಾವಾಗ ಈಡೇರಿಸುವುದು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಮಂತ್ತು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—

(ಅ) ಇಲ್ಲ

(ಆ) ಯಲಹಂಕ ಟೌನ್‌ಗೆ ಕುಡಿಯುವ ನೀರನ್ನು ಒದಗಿಸುವ ಯೋಜನೆಯನ್ನು ೧೯೮೫-೮೬ನೇ ಸಾಲಿನ ಕಾಮಗಾರಿಗಳಲ್ಲಿ ಬೆಂಗಳೂರು ಜಲ ಮಂಡಳಿಯ ತನ್ನ ಆಯವ್ಯಯದಲ್ಲಿಯೇ ಸೇರಿಸಲು ಬೆಂಗಳೂರು ಜಲ ಮಂಡಳಿಗೆ ಸರ್ಕಾರವು ಅನುಮತಿಯನ್ನು ಕೊಡಲಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ನಮ್ಮ ಕ್ಷೇತ್ರದಲ್ಲಿರತಕ್ಕ ಯಲಹಂಕಕ್ಕೆ ಟೌನ್ ಮುನಿಸಿಪಾಲಿಟಿ ಇದೆ, ಪಕ್ಕದಲ್ಲಿ ಎಸ್ಕಾರ್ಟ್ ಫ್ಯಾಕ್ಟರಿ ಇದೆ. ಮತ್ತು ಹೌಸಿಂಗ್ ಬೋರ್ಡ್ ಕಾಲೋನಿ ಇದೆ. ಅದನ್ನು ಯಲಹಂಕ ಮುನಿಸಿಪಾಲಿಟಿಗೆ ಸೇರಿಸಬೇಕು. ಅಲ್ಲಿಗೆ ಅದಷ್ಟು ಜಾಗ್ರತೆ ನೀರನ್ನು ಒದಗಿಸುವುದಕ್ಕೆ ತಾವು ನಿರ್ದೇಶನ ಕೊಡುತ್ತೀರಾ ? ಹಣದ ವಿಚಾರದಲ್ಲಿ ಕೆಲವು ತಾಪತ್ರಯಗಳು ಬರುತ್ತವೆ. ಅದಕ್ಕೆ ಹಣವನ್ನು ಎಲ್.ಐ.ಸಿ. ಯಿಂದ ಕೊಡಬೇಕೇ ಅಥವಾ ಸರ್ಕಾರದಿಂದ ಕೊಡಬೇಕೇ ಎಂಬ ಪ್ರಶ್ನೆ ಬರುತ್ತದೆ ನಾನು ಸರ್ಕಾರದಿಂದಲೇ ಕೊಡಬೇಕೆಂದು ಹೇಳುತ್ತೇನೆ. ಏಕೆಂದರೆ, ಅದು ಬೆಂಗಳೂರು ಸಿಟಿಯ ಪಕ್ಕದಲ್ಲಿಯೇ ಇದೆ. ಅಲ್ಲಿಗೆ ಜರೂರಾಗಿ ನೀರನ್ನು ಒದಗಿಸತಕ್ಕ ವ್ಯವಸ್ಥೆ ಮಾಡಬೇಕಾಗಿದೆ. ನಿಮ್ಮ ಕೈಯಲ್ಲಿ ಈ ಕೆಲಸ ಆಗದೆ ಹೋದರೆ ಮುನಿಸಿಪಾಲಿಟಿಯವರು ಸಾಲ ತೆಗೆದುಕೊಳ್ಳಲಿ. ಅವರು ಆ ಹೊರೆಯನ್ನು ಹೊರಲಿಕ್ಕೆ ತಯಾರಿದ್ದಾರೆ. ಅದಕ್ಕೆ ಯೋಜನೆ ಕೂಡಾ ಮಾಡಿದ್ದಾರೆ. ಆದ್ದರಿಂದ ಸರ್ಕಾರದಿಂದ ಕೊಡಲಿಕ್ಕೆ ಹಣ ಇಲ್ಲದಿದ್ದರೆ ಎಲ್.ಐ.ಸಿ. ಯಿಂದ ಆದರೂ ಸಾಲ ತಂದುನೀರು ಕೊಡತಕ್ಕ ಕೆಲಸವನ್ನು ಆದಷ್ಟು ಜಾಗ್ರತೆ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್ —ಯಲಹಂಕ ಟೌನಿಗೆ ನೀರಿನ ಮೆಯಿನ್‌ಗಳನ್ನು ಊರಿನವರೆಗೆ ತೆಗದುಕೊಂಡು ಹೋಗಿದ್ದಾರೆ. ಡಿಸ್ಟ್ರಿಬ್ಯೂಷನ್ ಮೆಯಿನ್ ಲೈನ್‌ಗಳಿಗೆ ತಗಲತಕ್ಕ ಖರ್ಚನ್ನು ಮುನಿಸಿಪಾಲಿಟಿಯವರು ಕೊಡಬೇಕೆಂದು ಜಲ ಮಂಡಲಿಯವರು ೨೪ ಲಕ್ಷ ರೂಪಾಯಿಗಳ ಅಂದಾಜನ್ನು ೧೯೮೫ರಲ್ಲೇ ಕಳುಹಿಸಿಕೊಟ್ಟಿದ್ದಾರೆ ಈಗ ಅದರ ಬೆಲೆ ೩೦ ಲಕ್ಷ ರೂಪಾಯಿಗಳಿಗಿಂತ ಕಡಿಮೆ ಆಗುವುದಿಲ್ಲವೆಂಬ ಅಭಿಪ್ರಾಯ ಇದೆ. ಹಣ ಇಲ್ಲದೆ ಡಿಸ್ಟ್ರಿಬ್ಯೂಷನ್ ಲೈನ್ಸ್ ಹಾಕುವುದಕ್ಕೆ ಕಷ್ಟವಾಗುತ್ತದೆ. ಸಾಲ ತೆಗೆದುಕೊಳ್ಳಿಎಂದು ಹೇಳುತ್ತೀರಿ. ಆದರೆ ಎಲ್ಲಿಂದ ತೆಗೆದುಕೊಳ್ಳುವುದು ? ಬೇರೆಯವರಿಗೆ ಏತಕ್ಕೆ ಕೊಟ್ಟಿದ್ದೀರೆಂದರೆ ಎಸ್ಕಾರ್ಟ್ ಟೌನ್‌ಷಿಪ್‌ಗೆ ಅವರೆಲ್ಲ ಹಣ ಕೊಟ್ಟಿದ್ದಾರೆ. ಹಣ ಒದಗಿಸುವುದು ಎಷ್ಟು ಕಷ್ಟ ಎಂಬುದು ಬಸವಲಿಂಗಪ್ಪನವರಿಗೆ ಗೊತ್ತಿದೆ. ಎಲ್.ಐ.ಸಿ.ಯಿಂದ ಸಾಲ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಅದನ್ನು ಇಷ್ಟಸ್ಸು ಕೊಡುವ ಜವಾಬ್ದಾರಿಯನ್ನು ಮುನಿಸಿಪಾಲಿಟಿಯವರು ಹೊರಬೇಕಾಗುತ್ತದೆ. ನೀವು ಹಣ ಒದಗಿಸಿಕೊಟ್ಟರೆ, ಅದು ಬಂದಂದಿನಿಂದಲೇ ಕೆಲಸ ಶುರು ಮಾಡುವುದಕ್ಕೆ ಸಿದ್ಧರಾಗಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಅವರು ಈಗ ಏನು ಕೆಲಸ ಮಾಡುತ್ತಿದ್ದಾರೆ. ಅದೇ ಕೆಲಸವನ್ನು ನಾನು ಹಿಂದೆ ಮಾಡುತ್ತಿದ್ದೆ. ಹುಬ್ಬಳ್ಳಿ ಧಾರವಾಡಕ್ಕೆ ಎಲ್. ಐ. ಸಿ.ಯಿಂದ ೭ ಕೋಟಿ ರೂಪಾಯಿ ಸಾಲ ತಂದು ನೀರು ಒದಗಿಸಿದ್ದೇನೆ. ಅದೇ ರೀತಿ ನೀವು ೩೦ ಲಕ್ಷ ರೂಪಾಯಿಗಳನ್ನು ಕೊಡಿ ಎಂದರೆ

ಮುನಿಸಿಪಾಲಿಟಿಯಲ್ಲಿ ಇಲ್ಲ ಎನ್ನುತ್ತೀರಿ. ಪಕ್ಕದಲ್ಲಿರತಕ್ಕ ದೊಡ್ಡ ದೊಡ್ಡ ಕಾರ್ಖಾನೆಗಳು, ಹೌಸಿಂಗ್ ಬೋರ್ಡ್ ಮನೆಗಳನ್ನು ಮುನಿಸಿಪಾಲಿಟಿಗೆ ಸೇರಿಸಿದರೆ ಒಳ್ಳೆಯ ಆದಾಯ ಬರುತ್ತದೆ. ನಾವು ಸಾಲವನ್ನು ಹೊರುವುದಕ್ಕೆ ತಯಾರಿದ್ದೇವೆಂದೂ ಮುನಿಸಿಪಾಲಿಟಿಯವರು ನಿರ್ಣಯ ಮಾಡಿ ಕಳುಹಿಸಿ ಕೊಟ್ಟಿದ್ದಾರೆ. ಆದ್ದರಿಂದ ಎಲ್.ಐ.ಸಿ.ಯಿಂದ ಆದರೂ ಸಾಲ ಕೊಡಿಸಬೇಕೆಂದು ಹೇಳುತ್ತೇನೆ. ಆದ್ದರಿಂದ ದಯಮಾಡಿ ಮಾಡುತ್ತೇವೆ ಎಂದು ಹೇಳಿ.

SRI A. LAKSHMI SAGAR.—I Will get this suggestion examined.

ಪ್ರಶ್ನೆ ಸಂಖ್ಯೆ ೬೨೫ (೧೪೭೮) ಸದಸ್ಯರು ಹಾಜರಿಲ್ಲ.

ಪ್ರಶ್ನೆ ಸಂಖ್ಯೆ ೬೦೬ (೧೪೬೪) ಸದಸ್ಯರು ಹಾಜರಿಲ್ಲ.

ರೇಷ್ಮೆ ನಟ್ಟಿ ಕೊಳ್ಳುವುದರ ವಿಚಾರ

೧೨೭೨. ಶ್ರೀ ಜಿ. ರಾಜೂಗೌಡ (ಹನೂರ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ರೇಷ್ಮೆ ವ್ಯವಸಾಯ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ಕರ್ನಾಟಕ ರೇಷ್ಮೆ ಕೈಗಾರಿಕಾ ಸಂಸ್ಥೆಯವರು ರೇಷ್ಮೆ ನಟ್ಟಿಯನ್ನು ಯಾವಾಗಲಿಂದ ಕೊಂಡುಕೊಳ್ಳುವುದನ್ನು ನಿಲ್ಲಿಸಿದ್ದಾರೆ,

(ಆ) ಸಂಸ್ಥೆಯ ಧೋರಣೆಯಿಂದ ರೇಷ್ಮೆ ಉದ್ಯಮಗಳ ಮೇಲೆ ಆಗಿರುವ ಪರಿಣಾಮವೇನು,

(ಇ) ರೇಷ್ಮೆ ನಟ್ಟಿಯ ರಫ್ತಿಗೆ ಸಂಬಂಧಿಸಿದಂತೆ ಅನುಸರಿಸಿರುವ ಕ್ರಮಗಳೇನು ?

ಶ್ರೀ ವೈ. ಕೆ. ರಾಮಯ್ಯ (ರೇಷ್ಮೆ ಮಂತ್ರಿ ಮತ್ತು ವ್ಯವಸಾಯ ರಾಜ್ಯ ಮಂತ್ರಿಗಳು).—

(ಅ) ರೇಷ್ಮೆ ನಟ್ಟಿಯನ್ನು ಕೊಂಡುಕೊಳ್ಳುವುದನ್ನು ಕರ್ನಾಟಕ ರೇಷ್ಮೆ ಕೈಗಾರಿಕಾ ಸಂಸ್ಥೆಯವರು ನಿಲ್ಲಿಸಿಲ್ಲ.

(ಆ) ಉದ್ಭವಿಸುವುದಿಲ್ಲ.

(ಇ) ದೇಶಗಲ್ಲಿಯ ಜ್ಯೂಟು ಗಿರಣಿಗಳಿಗೆ ಜ್ಯೂಟಿನ ಗುಣಮಟ್ಟದ ಮೇಲೆ ೪ ಅಥವಾ ೫ ಪಟ್ಟು ಜ್ಯೂಟು ರೇಷ್ಮೆ ಸರಬರಾಜು ಮಾಡಿದರೆ, ೧ ಪಟ್ಟು ಜ್ಯೂಟು ರೇಷ್ಮೆ ರಫ್ತು ಮಾಡಲು ಅನುವು ಮಾಡಿಕೊಡುವ ಒಂದು ಯೋಜನೆ ಕೇಂದ್ರ ಸರ್ಕಾರದ ಅನುಷ್ಠಾನಕ್ಕೆ ತಂದಿದೆ. ಈ ಯೋಜನೆಯನ್ವಯ ರೇಷ್ಮೆ ಕೈಗಾರಿಕಾ ನಿಗಮವು ೨೧೪ ಟನ್ ರೇಷ್ಮೆ ಜ್ಯೂಟು ಕೊಳ್ಳಲು ಇಲ್ಲಿಯವರೆಗೆ ಈಗಾಗಲೇ ಬೇಡಿಕೆ ನೀಡಿದೆ. ಮತ್ತು ಅದರಲ್ಲಿ ೩೫ ಟನ್‌ಗಳಷ್ಟು ಜ್ಯೂಟು ರೇಷ್ಮೆ ಸರಬರಾಜು ಆಗಿದೆ.

ಶ್ರೀ ಜಿ. ರಾಜಂಗೌಡ.—ಮಾನ್ಯ ಅಧ್ಯಕ್ಷರೆ, ಈಗ ರಾಜ್ಯದಲ್ಲಿ ಉತ್ಪಾದನೆ ಆಗತಕ್ಕ ಸಿಲ್ಕ್ ಬೇಸ್ಟ್‌ನಲ್ಲಿ ಕೆ.ಎಸ್.ಐ.ಸಿ.ಯವರು ಶೇಕಡಾ ಎಷ್ಟನ್ನು ಕೊಂಡುಕೊಳ್ಳುತ್ತಿದ್ದಾರೆ ? ರೇಷ್ಮೆ ಜೂಟಿನ ಬೆಲೆ ಏರಿಳಿತಕ್ಕೆ ಒಳಗಾಗುವುದರಿಂದ ನೂಲು ಬಿಚ್ಚುವವರಿಗೆ ನಷ್ಟವಾಗುವುದರಿಂದ ಇದನ್ನು ತಪ್ಪಿಸುವುದಕ್ಕೆ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮ ಯಾವುದು ?

ಶ್ರೀ ವೈ. ಕೆ. ರಾಮಯ್ಯ.—೧೯೮೪-೮೫ರಲ್ಲಿ ೩೭೦ ಟನ್ ಕೊಂಡುಕೊಂಡಿದ್ದೇವೆ. ೧೯೮೫-೮೬ರಲ್ಲಿ ೨೬೦ ಟನ್‌ಗೆ ಆರ್ಡರ್ ಪ್ಲೇಸ್ ಮಾಡಿದೆ. ಅದರಲ್ಲಿ ೩೫ ಟನ್ ಈಗಾಗಲೇ ಕೊಂಡುಕೊಂಡಿದ್ದೇವೆ, ಪರ್ಸೆಂಟೇಜ್ ಎಷ್ಟಾಗುತ್ತದೆ ಎಂಬ ಮಾಹಿತಿ ಈಗ ನನ್ನಲ್ಲಿಲ್ಲ. ರೇಷ್ಮೆ ಜ್ಯೂಟಿನ ಬೆಲೆ ಹೆಚ್ಚು ಕಡಿಮೆ ಆಗದಿರುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂದು ಕೇಳಿದ್ದಾರೆ. ೧೯೮೫-೮೬ರಲ್ಲಿ ಕೇಂದ್ರ ಸರ್ಕಾರದವರು ಹೊರದೇಶಕ್ಕೆ ರಫ್ತು ಮಾಡುವುದಕ್ಕೆ ರೀಲರ್ಸ್‌ಗೆ ಸ್ವಾತಂತ್ರ್ಯವನ್ನು ಕೊಟ್ಟಿರು. ಅದಾದಮೇಲೆ ಕೇಂದ್ರ ಸರ್ಕಾರದ ನೀತಿಯಿಂದ ಬೆಲೆ ಕಡಿಮೆಯಾಯಿತು. ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಜೊತೆ ಸಮಾಲೋಚನೆ ಮಾಡಿ ೧೭ನೇ ಏಪ್ರಿಲ್ ೧೯೮೫ರಿಂದ ಲಿಂಕೇಜ್ ಸಿಸ್ಟಂ ವ್ಯವಸ್ಥೆಯನ್ನು ಮಾಡಿದೆ. ಅದರ ಪ್ರಕಾರ ೫ ಕೆ.ಜಿ. ಉತ್ತಮ ಗುಣಮಟ್ಟದ ರೇಷ್ಮೆಯನ್ನು ಈ ರಾಷ್ಟ್ರದಲ್ಲಿ ಮಾರಿದರೆ ಒಂದು ಕೆ. ಜಿ. ಎಕ್ಸ್‌ಪೋರ್ಟ್ ಮಾಡಬಹುದು. ಸಾಮಾನ್ಯ ಗುಣಮಟ್ಟದ್ದು ನಾಲ್ಕು ಕೆ.ಜಿ. ಇಲ್ಲಿ ಸಪ್ಲೈ ಮಾಡಿದರೆ ಒಂದು ಕೆ. ಜಿ.ಯನ್ನು ಹೊರದೇಶಕ್ಕೆ ಕಳುಹಿಸಬಹುದು. ಈ ವ್ಯವಸ್ಥೆ ಇದೆ. ಇದರ ಪ್ರಕಾರ ರೀಲರ್ಸ್ ಸಪ್ಲೈ ಮಾಡುತ್ತಿದ್ದಾರೆ.